Reg No. M 1299) Daily & Weekly (Founded 1917

ಸತ್ಯವಾದಿ
SATYAVADI

ಸಂಪುಟ 27 ಸಂಚಿಕೆ 65] ಶನಿವಾರ 25—12—43 [ಕಾಲಾಣೆ

ಇಂಗ್ಲೆಂಡಿನಲ್ಲೂ ಗಾಂಧೀ ತತ್ವವೇ

ಯೂರೋಪಿನಲ್ಲಿ ಬಾಲಕರಿಗೆ ಅಪಾಯವನ್ನು ಕೊಡುವ ವಿಷಯದಲ್ಲಿ ತಮ್ಮ ಅನುತಾಪ ತೋರಿಸಲು ಬ್ರಿಟನ್ನಿನಲ್ಲಿ ಕೆಲವರು ಡಿಸೆಂಬರ್ 30–31 ರಲ್ಲಿ ಉಪವಾಸ ಮಾಡುವರು. ನೀರನ್ನು ಮಾತ್ರ ಸೇವಿಸುತ್ತಾರೆ! ಆಗೋ. ಇಂಗ್ಲೆಂಡಿನಲ್ಲೂ ಗಾಂಧೀ ತತ್ವ ಬೇರೂರಿತು.

ಂ ಂ

ರಷ್ಯಾದವರು ಈಚೆಗೆ 3 ಜರ್ಮನ್ ಅಧಿಕಾರಿಗಳನ್ನು ಗಲ್ಲಿಗೇರಿಸಿದರಷ್ಟೆ? ತಾವು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದಾಗಿ ಜರ್ಮನರು ಹೇಳಲಾರಂಭಿಸಿರುವರು.

ಂ ಂ

ಸೈನ್ಯದ ಚಲನವಲನಗಳನ್ನು ಹೇಳಿದಳೆಂದು ಕೆರಾಬೆಯ ಒಬ್ಬ ಭಾರಿ ಮಿಲಿಟರಿ ಅಧಿಕಾರಿಯ ಪತ್ನಿಯನ್ನು ಕೋರ್ಟಿನವರು ತಿಕ್ಕಿಸಿರುತ್ತಾರೆ.

ಂ ಂ

ಅಮೇರಿಕಾದ ರೈಲ್ವೇ ಆಡಳಿತವನ್ನು ಸರ್ಕಾರಿಯಾಗಿ ನಡೆಸುವುವೆಂದು ಮಿ॥ ರೂಸ್ವೆಲ್ಟರು ಹೇಳುವರು.

ರಷ್ಯಾದ ರಾಜಭಕ್ತಿ ತನಗಳನ್ನು ಬದಲಾಯಿಸಬೇಕೆಂದು ಪ್ರೊಫೆಸರ್ ಷಾರವರು ಸೂಚಿಸಿರುವರು.

ಂ ಂ

ಜಪಾನಿನಲ್ಲಿ ಮಿಲಿಟರಿಗೆ ಬಲವಂತವಾಗಿ ಸೇರಿಸಿಕೊಳ್ಳುವ ಅವಧಿಯನ್ನು ಇನ್ನೂ 1 ವರ್ಷ ಕಮ್ಮಿ ಮಾಡಿದೆ.

ಂ ಂ

ಅಲಹಾಬಾದಿನ ಒಬ್ಬ ವಕೀಲನು ತನಗೆ ಒಂದು ಹೆಣ್ಣು ಮಗುವಾದುದನ್ನು ತಿಳಿಸದಿರಲು ಆ ವಕೀಲನಿಗೆ ಒಂದು ಆಣೆ ಜುಲ್ಮಾನೆ ವಿಧಿಸಿದರು.

ಮೈಸೂರು ವಾರ್ತೆ (ಸ್ವಂ. ಸು) ಡಿ. 24

ಬೃಂದಾವನದಲ್ಲಿ ಇವತ್ತಿನಿಂದ ಕೆಲವು ದಿವಸಗಳು ದೀಪೋತ್ಸವ ನಡೆಯುತ್ತದೆ.

ಅಕ್ಕಿ ರಾಗಿ ಹಂಚುವ ಕೆಲವು ಡಿಪೋಗಳನ್ನು ಲಷ್ಕರ್ ಮೊಹಲ್ಲಾದಲ್ಲಿ ಜನರು ಲೂಟಿ ಮಾಡಿದರೆಂದು ತಿಳಿಯಬರುತ್ತೆ.

ಶ್ರೀಮನ್ಮಹಾರಾಜರು ಬೆಂಗಳೂರಿಗೆ ದಯಮಾಡಿಸಿರುವರೆಂದೂ, ಅಲ್ಲಿ ಒಂದು ವಾರವಿರುವರೆಂದೂ ತಿಳಿಯಬಂದಿದೆ.

ಮಿತ್ರರ ಭಾರಿ ಧಾಳಿ

ನಿನ್ನೆ ಇಂಗ್ಲೆಂಡಿನಿಂದ 1500 ಅಮೇರಿಕ ವಿಮಾನಗಳು ಫ್ರಾನ್ಸಿನ ಕಲೆ ಪಟ್ಟಣದ ಮೇಲೆ ಹಲ್ಲಾ ಮಾಡಿದವು. ಶತ್ರುಗಳಿಗೆ ವಿಶೇಷ ನಷ್ಟವಾಯಿತು. ಹೀಗೆ ಏಕ ಕಾಲದಲ್ಲಿ ಇಷ್ಟೊಂದು ವಿಮಾನಗಳನ್ನು ಯಾರೂ ದಂಡಯಾತ್ರೆಗೆ ತೆಗೆದುಕೊಂಡು ಹೋಗಿರುವುದಿಲ್ಲ. ಈ ಕಾರ್ಯಾಚರಣೆಯಲ್ಲಿ ಅಮೇರಿಕಾದವರ ಒಂದು ವಿಮಾನವಾದರೂ ನಷ್ಟವಾಗಲಿಲ್ಲ.

ಮುಖ್ಯ ಸೇನಾನಾಯಕತ್ವ

ಅಮೇರಿಕಾದ ಜನರಲ್ ಐಸೆಹೋವರಿಗೆ ಈಗ ಯೂರೋಪಿನ ಸರ್ವ ಶ್ರೇಷ್ಠ ಸೈನ್ಯಾಧಿಕಾರವನ್ನು ಮಿ॥ ರೂಸ್ವೆಲ್ಟರು ಕೊಟ್ಟಿರುವರು. ಇವರು ಇಂಗ್ಲೆಂಡಿನಲ್ಲಿ ತಮ್ಮ ಕಛೇರಿಯನ್ನು ಇಟ್ಟುಕೊಳ್ಳುವರು ಇವರ ಕೈಕೆಳಗೆ ಜನರಲ್ ಮಾಂಟ್‌ಗೊಮರಿಯವರು ಕೆಲಸ ಮಾಡುವರು.

ಅದೇ ಹಾಡು!

ನಿನ್ನೆ ಕರಾಚಿಯಲ್ಲಿ ಜಿನ್ನಾರವರು 31 ಆಲ್ ಇಂಡಿಯಾ ಮುಸ್ಲಿಂ ಲೀಗ್ ಸಮಾವೇಶವನ್ನು ನೆರವೇರಿಸಿದರು. ತಮ್ಮ ಪಾಕಿಸ್ತಾನ್ ಹಾಡನ್ನು ಮತ್ತೆ ಒತ್ತಿ ಹಾಡಿದರು.

ಅಗಾಧ ಸೈನ್ಯ

ಈಗ ಪ್ರಪಂಚದ ನಾನಾ ಭಾಗಗಳಿಂದ ಅಮೇರಿಕ ಸೇನೆಗಳು 38 ಕೋಟಿ ಹೋಗಿರುವುವೆಂದು ಮಿ॥ ರೂಸ್ವೆಲ್ಟರು ತಮ್ಮ ಸಂದೇಶದಲ್ಲಿ ತಿಳಿಸಿರುವರು.

ಚಕ್ರವರ್ತಿಗಳ ಸಂದೇಶ

ಈ ದಿವಸ ರಾತ್ರೆ 9॥ ಗಂಟೆಗೆ ಚಕ್ರವರ್ತಿಗಳು ಒಂದು ಸಂದೇಶವನ್ನು ಲಂಡನ್ನಿನಿಂದ ಬ್ರಾಡ್‌ಕ್ಯಾಸ್ಟ್ ಮಾಡುವರು.

ಂ ಂ

ರಷ್ಯನ್ನರ ಸಾಹಸ

ರಷ್ಯಾದಲ್ಲಿರುವ ಗರಾಡಾಗ್ ಪಟ್ಟಣವನ್ನು ಉಳಿಸಿಕೊಳ್ಳಲು ಜರ್ಮನರು ಎಷ್ಟು ಪ್ರಯತ್ನ ಮಾಡಿದರೂ ಸಾಗದೆ. ರಷ್ಯನ್ನರ ವಶವಾಯಿತು.

ಂ ಂ

ಸೈನ್ಯ ತರಬೇತು

ಈಗ ರಷ್ಯನ್ನರು ಮಾಸ್ಕೋವಿಗೆ ಉತ್ತರದಲ್ಲಿ ಚಳಿಗಾಲದಲ್ಲಿ ಯುದ್ಧ ಮಾಡಲು ಮೂರೂವರೆ ಲಕ್ಷ ಸೇನೆಗಳನ್ನು ತರಬೇತು ಮಾಡುತ್ತಿದ್ದಾರೆ.

ಂ ಂ

ಇಟಲಿಯಲ್ಲಿ ಕದನ

ಇಟಲಿಯ ಬರೆಟೋನಾ ಜೀದಿಗಳಲ್ಲಿ ಜರ್ಮನರೂ ಮಿತ್ರರೂ ಯುದ್ಧಮಾಡುತ್ತಿರುವರು.

ಂ ಂ

ವೈಸರಾಯರ ಭಾಷಣ

ಮುಂದಿನ ಫೆಬ್ರವರಿ 17 ರಲ್ಲಿ ಸೇರುವ ಸೆಂಟ್ರಲ್ ಅಸೆಂಬ್ಲಿ ಮತ್ತು ಕೌನ್ಸಿಲ್ ಆಫ್ ಸ್ಟೇಟ್ ಸಭೆಗಳಲ್ಲಿ ವೈಸರಾಯರು ಭಾಷಣಮಾಡುವರು.

ಂ ಂ

ಸಂಸ್ಕೃತದಲ್ಲಿ ಕಾಗದ

ಜರ್ಮನಿಯಲ್ಲಿ ಭಾರತ ಖೈದಿಗಳಿಗೆ ಸಂಸ್ಕೃತದಲ್ಲಿ ಕಾಗದ ಬರೆಯಲು ಜರ್ಮನ್ ಸರಕಾರ ಒಪ್ಪಿಕೊಂಡಿದೆ.

Opera — — Bhaktaraj

ಅಪೆರಾದಲ್ಲಿ

ವಿಷ್ಣುಪಂತ್ ಪಾಗ್ನೀಸ್,
ವಾಸಂತಿ, ದೀಕ್ಷಿತ್- ಮುಬಾರಕ್
ಕಾಂತಿಲಾಲ್, ಬಿಲಿಮೋರಿಯಾ
– ಮುಂತಾದವರು ನಾತ್ಯವಹಿಸಿರುವ –

"ಭಕ್ತರಾಜ್"

ಭಕ್ತಿರಸಪ್ರಧಾನವಾದ
ಅಮೋಘ ಹಿಂದೀ ಚಿತ್ರ

ಕಡೇ 2 ತರಗತಿಗಳು 0-5-0, 0-3-0
ಇತರ ತರಗತಿಗಳು ಎಂದಿನಂತೆ.

ಪ್ರತಿ ದಿನ 3 ಆಟಗಳು

.... ಪ್ರತಿ ದಿನ 2 ಆಟಗಳು ....
೧ ನೇ ಆಟ ೬-೫೦ ಕ್ಕೆ .... ೨ ನೇ ಆಟ ೧೦ ಕ್ಕೆ

ಬಾಂಬೆ ಜಿ. ಎ. ಸರ್ಕಸ್

ಸ್ಥಳ — ಜೀವಣ್ಣರಾಯನಕಟ್ಟೆ, ಮೈಸೂರು

೧೦೧ ಆಟಗಾರರು, ೧೦೧ ಮೃಗಗಳು, ೨೪ ಸ್ತ್ರೀಯರ ಜಮ್ನಾಸ್ಟಿಕ್ ಡ್ಯಾನ್ಸುನೋಡಲು ಮರೆಯಬೇಡಿ

ಜೀವದ ಮೋಹವನ್ನು ನುಂಗಿ, ಅದರಮೇಲೆ 2 ಕೊಡ ನೀರನ್ನು ಕುಡಿದುಹೊಟ್ಟೆಯಲ್ಲಿರಿಸಿಕೊಂಡು, ನಂತರ ಜೀವಸಹಿತವಾಗಿಯೂ ನೀರನ್ನೂ ಹೊರಗೆ ಪೂರಾ ತೆಗೆಯುವ ಅದ್ಭುತ ಸಾಹಸವನ್ನು ತಪ್ಪದೇ ನೋಡಿರಿ
— ಫ್ಲೈಯಿಂಗ್ ಟ್ರಪೀಸ್ ಆಟವನ್ನು ಜರೂರು ನೋಡಿರಿ. —

3 ನೇ ವಾರ

ರಣಜಿತ್ ಟಾಕೀಸ್

ಅಶೋಕ್ ಕುಮಾರ್
ವೀಣಾ — ತಾರ
ಕುಮಾರ್ — ಯಾಕೂಬ್
ಮುಂತಾದವರು ನಾತ್ಯವಹಿಸಿರುವ

ನಜ್ಲ

ಅಮೋಘ ಹಿಂದಿ ಚಿತ್ರ
ಪ್ರತಿ ದಿನ 3 ಆಟಗಳು

Ranjit — Najma

ಮೈಸೂರಿಗೆ

ಶ್ರೀಮನ್ಮಹಾರಾಜರವರ ಭೇಟಿ

(ನಮ್ಮ ವಿಶೇಷ ಪ್ರತಿನಿಧಿಯಿಂದ)

21–12–43 ರ ಶನಿವಾರ ಬೆಳಿಗ್ಗೆ 10-5 ಘಂಟೆಗೆ ಶ್ರೀಮನ್ಮಹಾರಾಜರವರು ದಿವಾನರೇ ಆದಿಯಾಗಿ ಸುಮಾರು 50 ಮಿತ ಪರಿವಾರದೊಡನೆ ಬಂದಾಗ ಖಾದೀ ಕೇಂದ್ರಕ್ಕೆ ದಯಮಾಡಿಸಿದರು. ಖಾದಿ ಕೇಂದ್ರವು ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದು ಸುತ್ತಮುತ್ತಿನಿಂದ ಸಾವಿರಾರು ಹಳ್ಳಿಗರು ಮಹಾರಾಜರನ್ನು ದರ್ಶನಮಾಡಲು ಬಂದಿದ್ದರು. ಶ್ರೀಮನ್ಮಹಾರಾಜರು ಖಾದಿ ಕೇಂದ್ರದ ಬಾಗಿಲಿಗೆ ಬಂದಕೂಡಲೇ ಅಲ್ಲಿ ನೂರಾರು ಸ್ತ್ರೀಯರು ಚರಕದಿಂದ ನೂಲು ತೆಗೆಯುವುದನ್ನು ನೋಡಿ ಆನಂದಪಟ್ಟರು. ಬಾಗಿಲಿನ ಮುಂದೆ ಹಾಕಿದ್ದ ಸುಂದರವಾದ ಚಪ್ಪರಕ್ಕೆ ಸವಾರಿ ಚಿತ್ತೈಸಿದ ಕೂಡಲೇ ಡೆ॥ ಡೈರೆಕ್ಟರು ಶ್ರೀ ಎಂ. ಎಲ್. ನರಸಿಂಹಯ್ಯಂಗಾರ್ಯರೂ ಮತ್ತು ಖಾದಿ ಕೇಂದ್ರದ ಮುಖ್ಯಾಧಿಕಾರಿಗಳಾದ ಶ್ರೀ ಎಸ್. ವಿ ರಾಜಾರಾಮಯ್ಯಂಗಾರ್ಯರೂ ಮಹಾರಾಜರಿಗೆ ಹಾರಾತುರಾಯಿ ಒಪ್ಪಿಸಿದರು. ನಂತರ ಶ್ರೀಮನ್ಮಹಾರಾಜರು ದಿವಾನರೊಡಗೂಡಿ, ಖಾದಿ ಹಾಲಿನಲ್ಲಿ ಸಾಲುಸಾಲಾಗಿ ಸಿದ್ಧಿತಯಾರಾದ ಒಟ್ಟಿ, ಕಾಗದ, ಚಾಪೆ ಮುಂತಾದುವುಗಳನ್ನು ನೋಡುತ್ತಾ, ಪ್ರತಿಯೊಂದರ ತಯಾರಿಕೆಯ ಕಾಲ, ಕ್ರಮ, ಮಾರಾಟ, ಇವುಗಳ ಪ್ರಶ್ನೆಹಾಕುತ್ತಾ, ಒಂದು [illegible] ಮ್ಯಾನೇಜರ್ ಶ್ರೀ ರಾಮಾಂಜನೇಯಯ್ಯಂಗಾರ್ಯರು ಉತ್ತರ ಕೊಟ್ಟರು. ಅಲ್ಲಿ ಕೈಯಿಂದ ಕಾಗದ ತಯಾರಿಮಾಡುತ್ತಿದ್ದ ಕಡೆಗೆ ಸವಾರಿ ಚಿತ್ತೈಸಿತು. ಬಗೆಬಗೆಯ ಕಾಗದಗಳೂ, ಕವಡೆಗಳೂ, ಪ್ಯಾಡುಗಳನ್ನೂ ನೋಡುತ್ತಾ ಇವುಗಳ ತಯಾರಿಕೆ ವಿಷಯ ಕೇಳುತ್ತಾ ಅಲ್ಲೇ ೭॥ ನಿಮಿಷ ಕಳೆದರು. ಈ ಇಲಾಖೆಯು ಶ್ರೀ ಟಿ. ಎಸ್. ಗೋವಿಂದರಾಯರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ. ಇಲ್ಲಿಂದ ಸವಾರಿಯು ಹಸೇ ಭೂತಾಳಿಯಿಂದ ನಾರು ತೆಗೆಯುವದನ್ನು ನೋಡಿ ಸಂತೋಷಪಟ್ಟರು. ಸುಮಾರು ಅರ್ಧ ಗಂಟೆ ಖಾದಿ ಕ್ಷೇತ್ರದ ನಾನಾ ಕೈಗಾರಿಕೆಯನ್ನೆ ನೋಡಿ ತುಂಬಾ ಸಂತೋಷಗೊಂಡು ನಂತರ ಚಾಮರಾಜನಗರಕ್ಕೆ ಪ್ರಯಾಣ ಮುಂದುವರಿಸಿದರು.

Visit

Sastry's Coffee Rooms
Chamarajapuram
Mysore

Laksbminarasimha
PRESS
Artistic & Colour Printing
a Sspciality
Srirampet, Mysore

ಸತ್ಯವಾದಿ ವಾರದಸಂಚಿಕೆ

ಪ್ರತಿ ಸೋಮವಾರ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ. 1--12--0. ಮನಿಯಾರ್ಡರ್ ಮಾಡಬೇಕು. ವಿ. ಪಿ. ಇಲ್ಲ.

——ಶಕ್ತಿಸುಧಾ

ದೇಹದೌರ್ಬಲ್ಯ ಬಲಹೀನತೆ ಇವಗಳನ್ನು ಹೋಗಲಾಡಿಸಿ ವೀರ್ಯಾಭಿವೃದ್ಧಿ ಮಾಡಿ ದೇಹಕ್ಕೆ ಕಾಂತಿಯನ್ನು ಉಂಟುಮಾಡುತ್ತೆ

ಈವತ್ತೇ ಕೊಂಡು ಉಪಯೋಗಿಸಿರಿ!

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

೧೦೬೭, ಚಾಮರಾಜಪುರಂ ಮೈಸೂರು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ವಿದೇಶವಿದೇಶ

ಭಾರತದಲ್ಲಿ 40477 ಮೈಲಿಲೈಲು, 623000000 ಪ್ರಯಾಣೀಕರು (1941–1942) 96000000 ಟನ್ ಸಾಮಾನು, 14469000000 ರೂ. ಸಂಪಾದನೆಯಾಗಿದೆ. 758000 ರೈಲ್ವೇ ಕೆಲಸಗಾರರು, ವಷ್ಯಕ್ಕೆ 381400000 ರೂ. ಸಂಬಳ.

o o

ರಷ್ಯಾದ ಯುವಕರು ನಮ್ಮ ಹಾಗೆ ಸೋಮಾರಿಯಾಗಿ ಕೂತಿರುವರೇ? ಈ ಯುವಕರಿಂದಲ್ಲವೇ ಹಿಟ್ಲರ್ ಆಟ ನಡೆಯದಿದ್ದದ್ದು, ಇಂಗ್ಲೆಂಡ್ ತನ್ನ ವ್ಯಾಣ ಉಳಿಸಿಕೊಂಡದ್ದು. ಅಮೇರಿಕಾದ ಯುವಕರೂ ಕೂಡ ಈಗಿನ ಯುದ್ಧದಲ್ಲಿ ತಮ್ಮ ಯುವಕರು ತಮ್ಮ ಶಕ್ತಿಯನ್ನು ತೋರಿಸುತ್ತಿಲ್ಲವೇ? ನಮ್ಮ ಯುವಕರ ಏನು ಮಾಡುತ್ತಿದ್ದಾರೆ?

o o

ಭಾರತ ಸರಕಾರದವರು ಗಾಂಧೀಜಿ ಮುಂತಾದ ಕಾಂಗ್ರೆಸ್ ನಾಯಕರನ್ನು ಬಂಧನದಿಂದ ಬಿಡುವರಂತಿಲ್ಲ. ಕಾರಣ ಗಾಂಧೀಜಿಯವರು ಸರ್ದಾರ್ ವಲ್ಲಭ್ಭಾಯಿ ಪಟೇಲರ ಮಾತನ್ನು ಕೇಳದೆಯೇ ಯಾವ ಕೆಲಸವನ್ನೂ ಮಾಡುವುದಿಲ್ಲವಂತೆ!

o o

ಒಬ್ಬ ಆಂಗ್ಲೇಯನು ದಕ್ಷಿಣ ಆಫ್ರಿಕಾದ ನೇಟಾಲ್ ಪತ್ರಿಕೆಗೆ, ಹಿಂದೂಗಳು ವರ್ಷಕ್ಕೆ 52 ರೂಪಾಯಿಗಳಲ್ಲಿ ಜೀವನ ಮಾಡುವರು ಎಂದು ಬರೆದಿರುವನು.

o o

ಇಂಡೋರ್ ಮಹಾರಾಜರು ತಮ್ಮ ನೂತನ ಅಮೇರಿಕಾ ಪೆಂಡತಿಯನ್ನು ಡೆಲ್ಲೀಗೆ ಕರೆದುಕೊಂಡು ಬಂದಿರುತ್ತಾರೆ. ಇವರ ಉದ್ದೇಶ ಭಾರತ ಸರಕಾರದವರು ಈ ನೂತನ ಪತ್ನಿಯನ್ನು ಮಹಾರಾಣಿ ಎಂದು ಒಪ್ಪಿಕೊಳ್ಳಬೇಕೆಂದು.

ಚರ್ಚಿಲ್ಲರು ಸ್ಟಾಲಿನ್‌ರಿಗೆ [illegible] ಕತ್ತಿಯನ್ನು ಒಪ್ಪುಮಾನ ಮಾಡಿದರು. ಲೇಖನಿಗಿಂತ ಕತ್ತಿಯ ಶಕ್ತಿಯೇ ಹೆಚ್ಚಲ್ಲವೇ?

o o

ಜಬ್ಬಲ್ಪುರದಲ್ಲಿ ಒಬ್ಬ ರಾಜಕೀಯ ಖೈದಿಯನ್ನು ಖಾಯಿಲೆ ನಿಮಿತ್ತ ಆಸ್ಪತ್ರೆಗೆ ಕಳುಹಿಸಿದರು ಆಸ್ಪತ್ರೆಯಲ್ಲಿ ಈ ರಾಜಕೀಯ ಖೈದಿಯ ಪತ್ನಿಯು ಗಂಡನನ್ನು ನೋಡಲು, ಸರ್ಕಾರದವರು ಇವಳು ಇದೇ ರೀತಿ ನೋಡಿದರೆ ಜೈಲು ರೂಲ್ಸು ಮೀರಿ ಶಿಕ್ಷೆಯಾಗುವುದೆಂದು ನೋಟೀಸು ಕೊಟ್ಟಿರುತ್ತಾರೆ.

o o

ಆಹಾರ ಪದಾರ್ಥಗಳನ್ನು ಕಳುಹಿಸಲು ರೈಲ್ವೇ ಬೋರ್ಡಿನವರು ಇನ್ನು ಮುಂದೆ ಗುಡ್ಸ್ ಪಾರ್ಸಲ್ಸ್‌ಗಳನ್ನು ಕಳಿಸುವದನ್ನು ಕಮ್ಮಿ ಮಾಡುತ್ತಾರಂತೆ. ಅಲ್ಲದೆ ಪ್ರಯಾಣಿಕರು 200 ಮೈಲಿಗಿಂತ ಹೆಚ್ಚು ಪ್ರಯಾಣ ಮಾಡುವುದನ್ನು ಸಹಾ ನಿಷೇಧಿಸುತ್ತಾರಂತೆ.

o o

ಗದ್ದಿಗಳಲ್ಲಿ, ಅದೂ ಭತ್ತದ ಗದ್ದಿಗಳಲ್ಲಿ ಮೀನನ್ನು ಸಾಕುವುದರಿಂದ ರೈತನಿಗೆ ತುಂಬಾ ಆದಾಯವಾಗುವುದು. ಒಂದು ಮೀನು 12 ರಿಂದ 14 ಅಂಗುಲ ಉದ್ದ ಬೆಳೆಯಲು ಗದ್ದಿಯಲ್ಲಿ ಕೇವಲ ಕೆಲವು ತಿಂಗಳು ಮಾತ್ರ ಬೇಕಾಗುತ್ತೆ. ಇಷ್ಟೇ ಉದ್ದ ಕೊಳಗಳಲ್ಲಿ ಬೆಳೆಯಲು ಎರಡು ವರ್ಷ ಕಾಲ ಬೇಕು. ಅಲ್ಲದೆ ಭತ್ತದ ಪೈರಿನಲ್ಲಿರುವ ಹುಳುಗಳನ್ನು ತಿನ್ನುವುದು. ಈ ಪದ್ಧತಿಯನ್ನು ಜಪಾನಿನಲ್ಲಿ ಅನೇಕ ವರ್ಷಗಳಿಂದ ಆಚರಿಸುತ್ತಿರುವರು.

Do you want to deal with
MALABAR
Wholesale Merchant Commission Agent
— If so Please write to —
C. L. JOSEPH
GENERAL MERCHANT
BIG BAZAAR — — CALICUT